

## ಸಂಯೋಜಿತ ಹುಚ್ಚುತನ!

ಈಗಿನ ಕಲಾವಿದರು ಹೆಚ್ಚು ವೃತ್ತಿಪರರು. ವ್ಯವಹಾರದ ಬಗ್ಗೆ ಜಾಣ್ಮೆ ಹೊಂದಿದ್ದಾರೆ. ವ್ಯಾಪಾರದ ತಂತ್ರಗಳನ್ನು ಚೆನ್ನಾಗಿ ಅರಿತಿದ್ದಾರೆ. ಚಿತ್ರೋದ್ಯಮ ಎನ್ನುವುದು ಈಗ ಒಂದು ರೀತಿ ಸಂಯೋಜಿತ ಹುಚ್ಚುತನವಿದ್ದಂತೆ!

– ಇದು ನಟಿ ಶಿಲ್ಪಾ ಶೆಟ್ಟಿಯ ವಿಶ್ಲೇಷಣೆ. ಉದ್ಯಮಿಯೂ ಆಗಿರುವ ಶಿಲ್ಪಾ, ಸಿನಿಮಾ ಉದ್ಯಮದೊಳಗಿನ ವ್ಯಾವಹಾರಿಕ ಬದಲಾವಣೆಯನ್ನು ಸೂಕ್ಷ್ಮವಾಗಿ ಗಮನಿಸಿದ್ದಾಳೆ.

'ಇಂದಿನ ಕಲಾವಿದರು ಎಲ್ಲವನ್ನೂ ಮಾಡುತ್ತಾರೆ. ತಾಯಿಯ ಗರ್ಭದಲ್ಲಿರುವಾಗಲೇ ಎಲ್ಲ ವಿದ್ಯೆಗಳನ್ನೂ ಕಲಿತಿರುತ್ತಾರೆ. ಬಳಿಕ ಸಿನಿಮಾಕ್ಕೆ ಕಾಲಿಡುತ್ತಾರೆ. ಅವರು ತುಂಬಾ ವೃತ್ತಿಪರತೆ ಹೊಂದಿರುತ್ತಾರೆ. ನಾವು ಕೆಲಸಕ್ಕೆ ಸೇರಿದ ಮೇಲೆಯೇ ಎಲ್ಲವನ್ನೂ ಕಲಿತದ್ದು. ನಾನಂತೂ ಕಲಿತದ್ದು ಸಿನಿಮಾರಂಗಕ್ಕೆ ಬಂದ ಮೇಲೆಯೇ' ಎಂದಿದ್ದಾಳೆ ಶಿಲ್ಪಾ.

'ನಾನು ಅಭಿನಯ ತರಬೇತಿ ಶಾಲೆಗೂ ಹೋಗಿರಲಿಲ್ಲ. ನನ್ನ ಏಳನೇ ಸಿನಿಮಾದ ನಂತರವೇ ನಟನೆ ಮತ್ತು ಭಾವನೆಗಳನ್ನು ವ್ಯಕ್ತಪಡಿಸುವ ಕಲೆಯನ್ನು ಅರಿತುಕೊಂಡಿದ್ದು. ನನ್ನ ಆರಂಭದ ಕೆಲವು ಸಿನಿಮಾಗಳಲ್ಲಿ ನಿದ್ದೆಗಣ್ಣಲ್ಲಿ ನಡೆದವಳಂತೆ ಹೇಗೆ ಸಾಗಿದ್ದೆನೋ ನನಗೇ ಗೊತ್ತಿಲ್ಲ' ಎಂದಿದ್ದಾಳೆ ಆಕೆ.

ತನ್ನ ಹಳೆಯ ಸಿನಿಮಾಗಳನ್ನು ನೋಡಿದಾಗ, ತಾನೇನು ಮಾಡಿದ್ದೆ ಎಂದು ತನ್ನ ಬಗ್ಗೆ ಆಕೆಗೇ ಬೇಸರ ಮೂಡುತ್ತದೆಯಂತೆ. 'ಈಗಿನ ನಟಿಯರು ಸ್ಟೈಲಿಶ್ ಆಗಿರುತ್ತಾರೆ. ಅವರ ವ್ಯವಹಾರಗಳನ್ನು ನೋಡಿಕೊಳ್ಳಲೆಂದೇ ಮ್ಯಾನೇಜರ್‌ಗಳಿರುತ್ತಾರೆ. ನಾವು

## ಬಿಗ್ ಬಿ: ಕೋರ್ಟ್ ಭಯ!

ಬಾಲಿವುಡ್ ನಟರಿಗೂ ನ್ಯಾಯಾಲಯಕ್ಕೂ ನಂಟು ಜಾಸ್ತಿ. ಒಂದಿಲ್ಲೊಂದು ವಿವಾದಗಳಲ್ಲಿ ಸಿಲುಕಿ ಕೋರ್ಟ್ ಮೆಟ್ಟಿಲೇರುವವರು ಇದ್ದೇ ಇರುತ್ತಾರೆ. ಆದರೆ 73ರ 'ತರುಣ' ಬಿಗ್ ಬಿ ಅಮಿತಾಭ್ ಬಚ್ಚನ್ ಕೋರ್ಟ್‌ನಿಂದ ದೂರ. ಹಾಗೆಂದು ಅವರು ಕೋರ್ಟ್ ಮೆಟ್ಟಿಲೇರಿಲ್ಲ ಎಂದಲ್ಲ. ಬೋಫೋರ್ಸ್ ಹಗರಣಕ್ಕೆ ಸಂಬಂಧಿಸಿದಂತೆ ಅಮಿತಾಭ್, ನ್ಯಾಯಾಲಯಕ್ಕೆ ಒಮ್ಮೆ ಹಾಜರಾಗಿದ್ದರು. ಆದರೆ ಅದು ಭಾರತದಲ್ಲಿ ಅಲ್ಲ, ಲಂಡನ್‌ನಲ್ಲಿ. ಅದರ ಹೊರತಾಗಿ ಭಾರತದ ಯಾವ ಕೋರ್ಟ್‌ಗೂ ಅವರು ಹಾಜರಾಗುವ ಪ್ರಮೇಯ ಬಂದಿಲ್ಲ. ಅಂತಹ ಸಂದರ್ಭ ಬರುವುದೂ ಇಲ್ಲ ಎನ್ನುವುದು ಬಿಗ್‌ಬಿ ನಂಬಿಕೆ.

'ಪಿಂಕ್' ಚಿತ್ರದಲ್ಲಿ ಅಮಿತಾಭ್, ವಕೀಲರಾಗಿ ಕಾಣಿಸಿಕೊಳ್ಳುತ್ತಿದ್ದಾರೆ. 'ಭಾರತದ ನೈಜ ಕೋರ್ಟ್‌ನ ಮೆಟ್ಟಿಲನ್ನು ಎಂದಿಗೂ ಏರಿಲ್ಲ. ಆ ಸನ್ನಿವೇಶ ಬರಬಾರದು ಎಂದು ಆಶಿಸುತ್ತೇನೆ. ಲಂಡನ್‌ನ ಕೋರ್ಟ್‌ಗೆ ನನ್ನನ್ನು ಸಮರ್ಥಿಸಿಕೊಳ್ಳಲು ತೆರಳಿದ್ದೆ. ಅದೊಂದು ಸಮಯದಲ್ಲಿ ಮಾತ್ರ ನಾನು ನಿಜವಾದ ನ್ಯಾಯಾಲಯವನ್ನು ನೋಡಿರುವುದು' ಎಂದಿದ್ದಾರೆ ಬಿಗ್‌ಬಿ.

ಚಿತ್ರದ ಶೀರ್ಷಿಕೆಯಲ್ಲಿನ 'ಪಿಂಕ್' ಮಹಿಳಾ ಸಬಲೀಕರಣವನ್ನು ಸಂಕೇತಿಸುತ್ತದೆ. ಈ ಸಿನಿಮಾ ಮಹಿಳೆಯರು ಮತ್ತು ಅವರ ಸಾಮರ್ಥ್ಯವನ್ನು ಪ್ರತಿಬಿಂಬಿಸುತ್ತದೆ ಎಂದಿರುವ ಅವರು, ಚಿತ್ರದಲ್ಲಿ ಸಂಕಷ್ಟದಲ್ಲಿ ಸಿಲುಕುವ ಮೂವರು ಯುವತಿಯರ ವಿರುದ್ಧ ನಿಲ್ಲುವ ವಕೀಲನಾಗಿ ನಟಿಸುತ್ತಿದ್ದಾರೆ. ವಕೀಲನ ಪಾತ್ರಕ್ಕಾಗಿ ಚಿತ್ರದ ಬರಹಗಾರರು ಮತ್ತು ನಿರ್ದೇಶಕರು ಆಳವಾದ ಅಧ್ಯಯನ ನಡೆಸಿದ್ದಾರಂತೆ. ನ್ಯಾಯಾಲಯದ ಕಲಾಪಗಳನ್ನು ಆದಷ್ಟು ಸಹಜವಾಗಿ ಮೂಡಿಬರುವಂತೆ ಚಿತ್ರಿಸಲಾಗಿದೆ ಎಂದಿದ್ದಾರೆ ಬಿಗ್‌ಬಿ.

